ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ; 653
2. ವಿಧಾನ ಪರಿಷತ್ತ ಸದಸ್ಯರು : ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)
3. ಉತ್ತರಿಸ ಬೇಕಾದ ದಿನಾಂಕ : 04.03.2021
4. ಉತ್ತರಿಸ ಬೇಕಾದ ಸಚಿವರು : ಮುಖ್ಯ ಮಂತ್ರಿ

ಕ್ರಸಂ	ಪ್ರಶ್ನೆಗಳು	ಉತ್ತರಗಳು
(ಅ)	ಕೋವಿಡ್–19ರ ಪ್ರಯುಕ್ತ, ಎಲ್ಲಾ ನೇಮಕಾತಿಗಳಿಗೂ ಆರ್ಥಿಕ ಮಿತವ್ಯಯ ಹೇರಿರುವುದು ನಿಜವೇ; ಹಾಗಿದ್ದಲ್ಲಿ ಈ ಆದೇಶವನ್ನು ಯಾವಾಗ ಹಿಂಪಡೆಯಲಾಗುವುದು;	ರಾಜ್ಯದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ರಾಜಸ್ವ ಸಂಗ್ರಹಣೆಯಲ್ಲಿ ತೀವ್ರ ಕುಸಿತ ಉಂಟಾಗಿರುವುದರಿಂದ ಆರ್ಥಿಕ ಸ್ಥಿತಿಯನ್ನು ಸುಸ್ಥಿತಿಗೆ ತರುವ ನಿಟ್ಟಿನಲ್ಲಿ ಮತ್ತು ಇದಕ್ಕಾಗಿ ಸರ್ಕಾರದ ವೆಚ್ಚದ ಬಾಬ್ತಿನಲ್ಲಿ ಮಿತವ್ಯಯ ಪಾಲಿಸುವುದು ಅನಿವಾರ್ಯವಾಗಿರುವುದರಿಂದ, ಸುತ್ತೋಲೆ ಸಂಖ್ಯೆ:ಆಇ 157 ವೆಚ್ಚ–8 2020, ದಿನಾಂಕ:10.06.2020 ಹಾಗೂ ಸುತ್ತೋಲೆ ಸಂಖ್ಯೆ: ಆಇ 03 ಬಿಇಎಂ 2020, ದಿನಾಂಕ:06.07.2020 ರನ್ವಯ ಎಲ್ಲಾ ಶಾಲಾ ಕಾಲೇಜುಗಳಲ್ಲಿನ ಎಲ್ಲಾ ಹಂತದ ನೇಮಕಾತಿಯನ್ನು ತಡೆಹಿಡಿಯಲಾಗಿರುತ್ತದೆ. ರಾಜ್ಯದ ಆರ್ಥಿಕ ಸ್ಥಿತಿಯು ಸುಸ್ಥಿತಿಗೆ ಬಂದ ನಂತರ ಮೇಲ್ಕಂಡ ಸುತ್ತೋಲೆಗಳನ್ನು ಹಿಂಪಡೆಯುವ ಬಗ್ಗೆ ಪರಿಶೀಲಿಸಲಾಗುವುದು.
(ಆ)	ಆರ್ಥಿಕ ಇಲಾಖೆಯು ರಾಜ್ಯದಲ್ಲಿ 1995ರ ನಂತರ ಪ್ರಾರಂಭವಾದ ಎಲ್ಲಾ ವರ್ಗದ ಅರ್ಹ ಶಾಶ್ವತ ಅನುದಾನ ರಹಿತ ಶಾಲಾ ಕಾಲೇಜುಗಳಿಗೆ ಅನುದಾನ ನೀಡಲು ಇರುವ ತೊಂದರೆಗಳೇನು? (ವಿವರವಾದ ಮಾಹಿತಿ ನೀಡುವುದು)	ರಾಜ್ಯದಲ್ಲಿ 1994–95ರ ನಂತರ ಪ್ರಾರಂಭವಾದ ಶಾಶ್ವತ ಅನುದಾನರಹಿತ ಶಾಲಾ ಕಾಲೇಜುಗಳಿಗೆ ವೇತನಾನುದಾನ ವಿಸ್ತರಿಸುವ ಕುರಿತು ಸರ್ಕಾರದ ಪರಿಗಣನೆಯಲ್ಲಿ ಇರುವುದಿಲ್ಲ.
(ಇ)	ಯಾವ ಕಾಲಮಿತಿಯೊಳಗೆ ಸರ್ಕಾರ ಈ ಶಾಲಾ ಕಾಲೇಜುಗಳಿಗೆ ಅನುದಾನ ನೀಡುವುದು? (ವಿವರವಾದ ಮಾಹಿತಿ ನೀಡುವುದು)	(ಆ) ರಲ್ಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಬಿ.ಎಸ್.ಯಡಿಯೂರಪ್ಪ

ಸಂಖ್ಯೆ:ಆಇ 47 ವೆಚ್ಚ–8/2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ